/208387/2022

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಛೇರಿಗಳಿಗೆ ಬಿಲ್ಡ್, ಓನ್ & ಆಪರೇಟ್ ಮಾದರಿಯಲ್ಲಿ (BOO MODEL) ಐ.ಟಿ ಉಪಕರಣಗಳ ಪೂರೈಕೆ, ಅಳವಡಿಕೆ, ಕಾರ್ಯಾಚರಣೆ ಹಾಗೂ ನಿರ್ವಹಣೆ ಮಾಡಲು ಮತ್ತು ಅಗತ್ಯವಿರುವ ಮಾನವ ಸಂಪನ್ಮೂಲವನ್ನು ಪೂರೈಸುವ ಸಂಬಂಧ ಸೇವಾ ಪೂರೈಕೆದಾರರನ್ನು ಆಯ್ಕೆ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಪತ್ರ ಸಂಖ್ಯೆ: ಕಾಂಪ್/108/2020-21 ದಿನಾಂಕ: 30-10-2021.

* * *

ಪ್ರಸ್ತಾವನೆ:

ಮೇಲೆ ಓದಲಾದ ಪ್ರಸ್ತಾವನೆಯಲ್ಲಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಅಗತ್ಯವಿರುವ ಹಾರ್ಡ್‌ವೇರ್, ತಾಂತ್ರಿಕ ಸಿಬ್ಬಂದಿ, ಗಣಕಯಂತ್ರ ನಿರ್ವಾಹಕರು ಹಾಗೂ ಸ್ಟೇಷನರಿ ಸಾಮಗ್ರಿಗಳನ್ನು 05 ವರ್ಷಗಳ ಅವಧಿಗೆ ಸರಬರಾಜು ಮಾಡಲು ಸೇವಾ ಪೂರೈಕೆದಾರರನ್ನು ಆಯ್ಕೆ ಮಾಡುವ ಹಾಗೂ BOOT ಮಾದರಿಯಲ್ಲಿ ಆರ್‌ಎಫ್‌ಪಿಯನ್ನು ಸಿದ್ಧಪಡಿಸಿ ಅನುಮೋದನೆಗಾಗಿ ಹಾಗೂ ಅನುದಾನ ಬಿಡುಗಡೆಗಾಗಿ ದಿನಾಂಕ: 05-04-2021 ರಂದು ಪ್ರಸ್ತಾವನೆಯಲ್ಲಿ ತಿಳಿಸಿದ್ದು, ಅದರಂತೆ ಸದರಿ BOOT ಆರ್‌ಎಫ್‌ಪಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇ-ಆಡಳಿತ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 28-06-2021 ರಂದು ನಡೆದ ಇ-ಆಡಳಿತ ವಾರ್ಷಿಕ ಕ್ರಿಯಾ ಯೋಜನೆಯ ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 26-08-2021 ರಂದು ನಡೆದ ತಾಂತ್ರಿಕ ಸಲಹಾ ಸಮಿತಿಯ ಸಭೆಯಲ್ಲಿ ಖರೀದಿಸಲು ಉದ್ದೇಶಿಸಲಾಗಿರುವ ಕೆಲವು ಕಂಪ್ಯೂಟರ್ ಹಾರ್ಡ್‌ವೇರ್‌ಗಳ Specification ಗಳಲ್ಲಿ ಮಾರ್ಪಾಡು / ಬದಲಾವಣೆಗಳನ್ನು ಮಾಡಲು ತಿಳಿಸಿದ್ದರಿಂದ, ಅದರಂತೆ ಆರ್‌ಎಫ್‌ಪಿ ಹಾಗೂ ದರಗಳನ್ನು ಪರಿಷ್ಕರಿಸಿ ದಿನಾಂಕ: 27-09-2021 ರಂದು ಐಜಿಆರ್ ರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 22-10-2021 ರಂದು ನಡೆದ ಇ-ಆಡಳಿತ ವಾರ್ಷಿಕ ಕ್ರಿಯಾ ಯೋಜನೆ ಅನುಮೋದನಾ ಅಧಿಕಾರಯುತ (Empowered Committee) ಸಮಿತಿಯ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

| Sl. No | Section | Decision |
|---|---|---|
| I | Engagement Model | Committee suggested changing the engagement model of proposed RFP to **BOO (Build, Own & Operate)** from BOOT (Build, Own, Operate & Transfer). |
| II | Contract Duration | As most of the IT hardware life span is not more than 5 years. Therefore, committee suggested restricting the **project duration to 5 years** of operations after successful Go-Live of project. Earlier it was proposed to 5 years + 2 years extendable after due approvals from competent authority. |
| III | Project Cost | ➢ Committee approved the total estimated project cost of **Rs. 406.44 Crores.** This cost includes following:-<br>• CAPEX cost of **Rs. 84.55 Crores**<br>o Hardware cost<br>o Licenses cost<br>o Finance cost of bidder @ 15% of CAPEX cost<br>• OPEX cost of **Rs 321.89** for 5 years of operations<br>o Manpower Cost<br>o Consumables<br>o Maintenance of existing assets<br>o Overheads (Training, OPE etc.)<br>o Office shifting cost |

| | | |
|---|---|---|
| | | OPEX cost<br>➤ Estimated cost of **Rs 25/- per page** was approved by the committee |
| IV | Commercial Evaluation | ➤ Committee suggested to add cost breakup format in RFP to discover the item wise cost. But the same will be not be considered for commercial evaluation and awarding of contract.<br>➤ Commercial evaluation will be done based on lowest rate quoted for scanning one page by the bidder. |
| V | Department commitment during term of the Project | As the newly approved model is BOO (build, own & operate), after completion of 5 years the appointed bidder will take away all deployed hardware and manpower.<br>Therefore, committee directed department to initiate the process of procurement of new hardware and manpower after 4 years of successful operations. So that new system integrator is on boarded before the end of contract period. |
| VI | Buyback cost | Since the hardware are out of life, as per the depreciation, there value will be Zero. And hence a nominal charge has been charged and the same was accepted by the committee. |

ಸದರಿ ಟೆಂಡರ್‌ನ ಅಂದಾಜು ವೆಚ್ಚವನ್ನು ಈ ಕೆಳಕಂಡಂತೆ ಲೆಕ್ಕ ಹಾಕಲಾಗಿದೆ:

| **Sl. No** | **Description** | **Total Cost for 5 years (in INR)** | **Cost in INR Crs.** |
|---|---|---|---|
| A. SI Costs | | | |
| I | **CAPEX** | | |
| 1 | Hardware Costs | 64,90,55,047 | 64.91 |
| 2 | Licenses Costs | 8,81,81,282 | 8.82 |
| 3 | Margin of bidder @ 15% | 11,05,85,449 | 11.06 |
| | **Total** | 84,78,21,778 | 84.78 |
| 4 | Buyback Costs | 23,62,850 | 0.24 |
| | **Total CAPEX (1+2+3) - (4)** | **84,54,58,928** | **84.55** |
| II | **OPEX** | | |
| 5 | Manpower | 224,13,61,197 | 224.14 |
| 6 | Consumable | 48,89,31,372 | 48.89 |
| 7 | Maintenance of existing assets | 4,84,16,754 | 4.84 |
| 8 | Overheads | 1,82,73,333 | 1.83 |
| 9 | Office Shifting Costs | 20,75,000 | 0.21 |
| 10 | Operational Cost of bidder @ 15% | 41,98,58,649 | 41.99 |
| | **Total OPEX (5+6+7+8+9+10)** | **321,89,16,305** | **321.89** |
| | **CAPEX + OPEX (5 Years)** | **406,43,75,234** | **406.44** |

ಸದರಿ ಟೆಂಡರ್‌ನ ಅಂದಾಜು ಮೊತ್ತದ ವರ್ಷವಾರು ವಿವರ ಈ ಕೆಳಕಂಡಂತಿದೆ.

| **Sl. No** | **Year** | **Financial Year** | **Amount (In INR)** |
|---|---|---|---|
| 1 | 1st Year | 2022-23 | 78,12,43,208 |
| 2 | 2nd Year | 2023-24 | 79,96,91,156 |
| 3 | 3rd Year | 2024-25 | 81,24,40,332 |
| 4 | 4th Year | 2025-26 | 82,52,44,304 |
| 5 | 5th Year | 2026-27 | 84,57,56,231 |
| | **Total Cost** | | **406,43,75,233** |

08387/2022 ಸಂಗ್ರಹವಾಗುವ ನಿರೀಕ್ಷೆಯಿದ್ದು, ಸದರಿ ಆದಾಯದಿಂದ BOO ಟೆಂಡರ್‌ಗೆ ತಗಲುವ ವೆಚ್ಚವನ್ನು ಭರಿಸುವುದಾಗಿ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 22-10-2021 ರಂದು ನಡೆದ ಇ-ಆಡಳಿತ ವಾರ್ಷಿಕ ಕ್ರಿಯಾ ಯೋಜನೆ ಅನುಮೋದನಾ ಅಧಿಕಾರಯುತ (Empowered Committee) ಸಮಿತಿಯ ಸಭೆಯಲ್ಲಿ ನಿರ್ಣಯಿಸಿರುವಂತೆ ಆರ್‌ಎಫ್‌ಪಿಯನ್ನು ಪರಿಷ್ಕರಿಸಿದ್ದು, ಸದರಿ ಆರ್‌ಎಫ್‌ಪಿ ಹಾಗೂ ಟೆಂಡರ್‌ನ ಮೊತ್ತ ರೂ.406.44 ಕೋಟಿಗಳ ಅನುಮೋದನೆಗಾಗಿ ಹಾಗೂ ಅವಶ್ಯಕವಿರುವ ಅನುದಾನವನ್ನು ಬಿಡುಗಡೆ ಮಾಡಲು ಐಜಿಆರ್ ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ/107/ಎಂಎನ್‌ಎಂಯು/2021**
**ಬೆಂಗಳೂರು, ದಿನಾಂಕ: 11-01-2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಛೇರಿಗಳಿಗೆ ಬಿಲ್ಡ್, ಓನ್ & ಆಪರೇಟ್ ಮಾದರಿಯಲ್ಲಿ (BOO MODEL) ಐ.ಟಿ ಉಪಕರಣಗಳ ಪೂರೈಕೆ, ಅಳವಡಿಕೆ, ಕಾರ್ಯಾಚರಣೆ ಹಾಗೂ ನಿರ್ವಹಣೆ ಮಾಡಲು ಮತ್ತು ಅಗತ್ಯವಿರುವ ಮಾನವ ಸಂಪನ್ಮೂಲವನ್ನು ಪೂರೈಸುವ ಸಂಬಂಧ 5 ವರ್ಷಗಳ ಅವಧಿಗೆ ಸೇವಾ ಪೂರೈಕೆದಾರರನ್ನು ಟೆಂಡರ್ ಮೂಲಕ ಆಯ್ಕೆ ಮಾಡಲು ಅಗತ್ಯವಿರುವ ರೂ.406.44 ಕೋಟಿಗಳ ಅನುದಾನದಲ್ಲಿ ಟೆಂಡರ್ ಪ್ರಕಟಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಸದರಿ ಟೆಂಡರ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳು, 2000 ರಲ್ಲಿ ನಿಗದಿಪಡಿಸಿರುವ ಕಾರ್ಯವಿಧಾನವನ್ನು ಅನುಸರಿಸಿ ಕೈಗೊಳ್ಳತಕ್ಕದ್ದು ಹಾಗೂ ಟೆಂಡರ್‌ನ್ನು ಒಪ್ಪಿಕೊಳ್ಳುವ ಪ್ರಾಧಿಕಾರ ಸರ್ಕಾರವೇ ಆಗಿರುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 733 ವೆಚ್ಚ-7/2021 ದಿನಾಂಕ: 10-12-2021 ರಲ್ಲಿ ನೀಡಿದ ಸಹಮತಿಯನ್ವಯ ಹಾಗೂ ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ.03/2022 ದಿನಾಂಕ: 06-01-2022 ರಂದು ಸಚಿವ ಸಂಪುಟವು ನೀಡಿರುವ ಅನುಮೋದನೆಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

14/1/22
**(ಎ.ಜಿ.ವೀಣಾ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ&ಇ), ಅಂಚೆ ಪೆಟ್ಟಿಗೆ ಸಂಖ್ಯೆ: 5329, ಪಾರ್ಕ್‌ಹೌಸ್ ರಸ್ತೆ, ಕರ್ನಾಟಕ, ಬೆಂಗಳೂರು-560 001.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಆಸು ಇಲಾಖೆ (ಇ-ಆಡಳಿತ), ಬಹುಮಹಡಿ ಕಟ್ಟಡ, ಬೆಂಗಳೂರು.
3. ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಕಂದಾಯ ಭವನ, 8 ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು.
4. ಸರ್ಕಾರದ ಜಂಟಿ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 7/8), ವಿಧಾನ ಸೌಧ, ಬೆಂಗಳೂರು.
6. ಅಪರ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.

**ಪ್ರತಿಗಳು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ, ಭೂಮಿ, ಯುಪಿಓಆರ್) ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ (ವಿ.ನಿ., ನೋಂದಣಿ ಮತ್ತು ಮುದ್ರಾಂಕ) ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಶಾಖಾ ರಕ್ಷಾ ಕಡತ ಮತ್ತು ಹೆಚ್ಚುವರಿ ಪ್ರತಿಗಳು.